# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

# Akkamahadevi Women`s University,Vijayapura

**ಕುಲಸಚಿವರು (ಮೌಲ್ಯಮಾಪನ)** — **Registrar (Evaluation)**

ಜ್ಞಾನಶಕ್ತಿ ಆವರಣ ಅಥಣಿ ರಸ್ತೆ, — **JnanaShakti Campus Athani Road,**

ವಿಜಯಪುರ -586108 — Vijayapura-586108

Phone Number: 08352-229023 — Fax Number 08352-229123


ಕ್ರ.ಸಂಖ್ಯೆ:ಅಮವಿವಿ/ಪರೀಕ್ಷಾ/ಬಿ.ಎಡ್/ಥೇರಿ/2017-18/ 1414 — ದಿನಾಂಕ: 06-07-2017.

## ಅಧಿಸೂಚನೆ

ವಿಷಯ:2017 ಜುಲೈ ತಿಂಗಳಲ್ಲಿ ಬಿ.ಎಡ್. **ಪ್ರಥಮ ಹಾಗೂ ತೃತೀಯ ಸೆಮಿಸ್ಟರ್ ಮತ್ತು ನಾನ್-ಸೆಮಿಸ್ಟರ್ ಲಿಖಿತ** ಪರೀಕ್ಷೆ ಜರುಗಿಸುವ ಕುರಿತು.

ಉಲ್ಲೇಖ:ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 5-7-2017

2017 ಜುಲೈ ತಿಂಗಳಲ್ಲಿ ಜರುಗುವ ಬಿ.ಎಡ್ ಪರೀಕ್ಷೆಗೆ ಅರ್ಜಿಗಳನ್ನು ಸ್ವೀಕರಿಸುವ ಹಾಗೂ ಪರೀಕ್ಷೆ ಪ್ರಾರಂಭವಾಗುವ ದಿನಾಂಕದ ಇತರ ವಿವರಗಳನ್ನು ತೋರಿಸುವ ಪಟ್ಟಿ.

| ಪರೀಕ್ಷೆ | ಪರೀಕ್ಷಾ ಶುಲ್ಕಗಳ ವಿವರ | ವಿದ್ಯಾರ್ಥಿನಿಯರು ಕಾಲೇಜಿನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬೇಕಾದ ಅಂತಿಮ ದಿನಾಂಕ | | ಪ್ರಾಂಶುಪಾಲರು ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಅಂತಿಮ ದಿನಾಂಕ | | | ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | |
|---|---|---|---|---|---|---|---|---|
| ಬಿ.ಎಡ್ | ಪರೀಕ್ಷಾ ಶುಲ್ಕ- 770/- ಅಂಕಪಟ್ಟಿ ಶುಲ್ಕ -180/ ಅರ್ಜಿ ಪರಿಶೀಲನಾ ಶುಲ್ಕ ರೂ 12/- ಒಟ್ಟು- 962 | ದಂಡ ಶುಲ್ಕವಿಲ್ಲದೆ | ರೂ. 100/- ದಂಡ ಶುಲ್ಕ ಸಹಿತ | ದಂಡ ಶುಲ್ಕವಿಲ್ಲದೆ | ರೂ.100/- ದಂಡ ಶುಲ್ಕ ಸಹಿತ | ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವ ದಿನಾಂಕ | ವಾರ್ಷಿಕ ಪ್ರಾಯೋಗಿಕ ಪರೀಕ್ಷೆ | ಲಿಖಿತ ಪರೀಕ್ಷೆ |
| | | 12-07-17 | 13-7-17 | 14-7-17 | 15-7-17 | 17-7-17 | ------ | ಅಗಷ್ಟ ಮೊದಲನೆಯ ವಾರ |

ನಾನ-ಸೆಮಿಸ್ಟರ್ ಮತ್ತು ಪ್ರಥಮ ಸೆಮಿಸ್ಟರ್ ರಿಪಿಟರ್ (ಪುನರಾವರ್ತಿತ) ಪ್ರತಿಯೊಂದು ವಿಷಯಕ್ಕೆ ಪರೀಕ್ಷಾ ಶುಲ್ಕ ರೂ.100/- ಮತ್ತು ಅಂಕಪಟ್ಟಿ ಶುಲ್ಕ ರೂ.180/-ಹಾಗೂ ಅರ್ಜಿ ಪರಿಶೀಲನಾ ಶುಲ್ಕ 12/- ಇರುವದು.3ವಿಷಯಗಳಿಗಿಂತ ಹೆಚ್ಚಿನ ವಿಷಯಗಳಲ್ಲಿ ಫೇಲಾದ ವಿದ್ಯಾರ್ಥಿಗಳು ಪೂರ್ಣ ಶುಲ್ಕ ಭರಿಸಬೇಕಾಗುವದು.

### I.ಮಹಾವಿದ್ಯಾಲಯಗಳ ಪ್ರಾಂಶುಪಾಲರ ಗಮನಕ್ಕಾಗಿ

**2013–14 ಹಾಗೂ 2014–15 ರಲ್ಲಿ ನಾನ ಸೆಮಿಸ್ಟರ್ ಪ್ರವೇಶ ಪಡೆದು ಕೆಲವು ಕಾರಣಗಳಿಂದ ಪರೀಕ್ಷೆಗೆ ಹಾಜರಾಗದೆ ಅಥವಾ ಅನುತ್ತೀರ್ಣಗೊಂಡ ವಿದ್ಯಾರ್ಥಿನಿಯರುಗಳಿಗೆ ವಿದ್ಯಾರ್ಥಿನಿಯರ ಭವಿಷ್ಯದ ಹಿತದೃಷ್ಟಿಯಿಂದ 2017 ಜುಲೈ ತಿಂಗಳಲ್ಲಿ ಜರುಗುವ ಪರೀಕ್ಷೆಯ ಜೊತೆಗೆ ಪರೀಕ್ಷೆ ಬರೆಯಲು ವಿಶೇಷ ಅವಕಾಶ ನೀಡಿದ್ದು ಈ ನಾನಸೆಮಿಸ್ಟರ್ (ರಿಪೀಟರ್) ವಿದ್ಯಾರ್ಥಿನಿಯರಿಗೆ ಸಂಬಂಧಿಸಿದಂತೆ ವಿವರಗಳನ್ನು ಮತ್ತು ಪ್ರಶ್ನೆಪತ್ರಿಕೆಗಳ ಬೇಡಿಕೆಯ ಪ್ರತಿಯನ್ನು ಪ್ರತ್ಯೇಕವಾಗಿ ಸಲ್ಲಿಸಬೇಕು.**

ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮುಗಿದ ಮರುದಿನದಂದು ಪರೀಕ್ಷಾ ಶುಲ್ಕದ ಹುಂಡಿಯನ್ನು /ಬ್ಯಾಂಕ ಚಲನನ್ನು ಪಡೆಯಬೇಕು. ಆ ದಿನವು ರಜೆ ಇದ್ದರೆ ಅದರ ಮರುದಿನದಂದು ಹುಂಡಿಯನ್ನು/ಬ್ಯಾಂಕ್ ಚಲನನ್ನು ಪಡೆಯಬೇಕು.

(P.T.O)

II.a) ಪರೀಕ್ಷಾ ಅರ್ಜಿ ನಮೂನೆಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಿಂದ ತಮ್ಮ ವಿದ್ಯಾರ್ಥಿನಿಯರ ಸಂಖ್ಯೆಗನುಗುಣವಾಗಿ ಪಡೆಯಬಹುದಾಗಿದೆ. **ಪ್ರತಿ ಅರ್ಜಿ ಫಾರ ಶುಲ್ಕ ರೂ. 70/-**

b) ಪ್ರತಿ ಪರೀಕ್ಷಾ ಅರ್ಜಿ ಶುಲ್ಕದ ಮೊತ್ತದಲ್ಲಿ ರೂ. 20/- ನ್ನು ಪರೀಕ್ಷಾ ಸಾದಿಲ್ವಾರು ವೆಚ್ಚಕ್ಕಾಗಿ ಪ್ಯಾಕಿಂಗ ಕವರ್, ಬಟ್ಟೆ, ದಾರ, ಇತರೆ ಖರ್ಚಿಗಾಗಿ ನಿಗದಿಪಡಿಸಲಾಗದೆ. ಅಷ್ಟು ಮೊತ್ತವನ್ನು ಕಡಿತಗೊಳಿಸಿ ಉಳಿದ ಹಣವನ್ನು ವಿಶ್ವವಿದ್ಯಾಲಯಕ್ಕೆ ಸಂದಾಯಗೊಳಿಸಬೇಕು.ಕಡಿತಗೊಳಿಸಿದ ರೂ.20/-ನ್ನು ತಮ್ಮ ಮಹಾವಿದ್ಯಾಲಯದಲ್ಲಿಯೇ ಉಳಿಸಿಕೊಂಡು ಪರೀಕ್ಷಾ ಸಾದಿಲ್ವರುವೆಚ್ಚಕ್ಕಾಗಿ ಉಪಯೋಗಿಸಬೇಕು. ಅದರ ಖರ್ಚಿನ ವಿವರಗಳನ್ನು ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗಕ್ಕೆ ಕಳುಹಿಸಿಬೇಕು.

III. **ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಗಮನಿಸಬೇಕಾದ ಅಂಶಗಳು.**

a) ವಿಶ್ವವಿದ್ಯಾಲಯದ ಶೈಕ್ಷಣಿಕ ವಿಭಾಗದಿಂದ ಅರ್ಹತಾ ಪ್ರಮಾಣ ಪತ್ರ ಪಡೆದಿರುವ ವಿದ್ಯಾರ್ಥಿನಿಯರ ಅರ್ಜಿಗಳನ್ನು ಮಾತ್ರ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು. ಅರ್ಹತಾ ಪತ್ರ ಇಲ್ಲದ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಕೂಡದು.

b) ಆನಲೈನ್ ನಲ್ಲಿ ನೀಡಲಾದ ಅಂಕಪಟ್ಟಿಗಳ ಅಥವಾ ಲೆಡ್ಜರ್ ಝುರಾಕ್ಸ ಪ್ರತಿಗಳ ಮೇಲೆ ಆಯಾ ಮಹಾವಿದ್ಯಾಲಯದ ಪ್ರಾಂಶುಪಾಲರೇ ದೃಢೀಕರಿಸಿರಬೇಕು. **ಒಂದು ವೇಳೆ ಪಲಿತಾಂಶ ಪ್ರಕಟವಾಗಿರದಿದ್ದರೆ ವಿದ್ಯಾರ್ಥಿನಿಯರ ಅರ್ಹತಾ ಪ್ರಮಾಣಪತ್ರ ಮತ್ತು ಕಳೆದ ಸೆಮಿಸ್ಟರ್‌ನ ಹಾಲ್ ಟಿಕೇಟ್ ಜರಾಕ್ಸ ಪ್ರತಿಯನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕು**

c) ಪ್ರವೇಶಪತ್ರದ ಮೇಲೆ ಅಂಟಿಸಲ್ಪಟ್ಟಿರುವ ವಿದ್ಯಾರ್ಥಿನಿಯರ ಭಾವಚಿತ್ರದ ಮೇಲೆ ಪ್ರಾಂಶುಪಾಲರ ಸಹಿ ಇರತಕ್ಕದ್ದು.

d) ಅಭ್ಯರ್ಥಿಗಳಿಂದ ಪಾವತಿಸಲಾದ ಅರ್ಜಿ ಪರಿಶೀಲನಾ ಶುಲ್ಕ ರೂ.12/- ರಲ್ಲಿ ರೂ. 7/- ನ್ನು ಕುಲಸಚಿವರು ( ಮೌಲ್ಯಮಾಪನ) ಇವರಿಗೆ ಪಾವತಿಯಾಗುವಂತೆ ಒಂದೇ ಕಂತಿನಲ್ಲಿ ಕಳುಹಿಸಬೇಕು. ರೂ 5/- ನ್ನು ಪರೀಕ್ಷಾ ಅರ್ಜಿ ಪರಿಶೀಲನಾ ಸಂಭಾವನೆಗಾಗಿ ಆಯಾ ಮಹಾವಿದ್ಯಾಲಯವು ಬಳಸಿಕೊಳ್ಳಬೇಕು.

e) ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವದು.

f) ತಮ್ಮ ಮಹಾವಿದ್ಯಾಲಯಕ್ಕೆ ಬೇಕಾಗುವ ಪ್ರಶ್ನೆ ಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು ವಿಷಯವಾರು/ಸೆಮಿಸ್ಟರ್/ನಾನಸೆಮ್ (ರಿಪಿಟರ್) ವಿದ್ಯಾರ್ಥಿನಿಯರಿಗೆ ಸಂಬಂದಿಸಿದಂತೆ (ದ್ವಿಪ್ರತಿಗಳಲ್ಲಿ ) ಈ ಕಛೇರಿಗೆ ದಿನಾಂಕ: 17-07-2017 ರೊಳಗಾಗಿ ಕಳುಹಿಸಲು ಕೋರಲಾಗಿದೆ. ಈ ಮಾಹಿತಿಯು ಸಕಾಲಕ್ಕೆ ತಲುಪದೆ ಹೋದಲ್ಲಿ ಅಥವಾ ದೋಷಪೂರ್ಣ ಮಾಹಿತಿ ಇದ್ದಲ್ಲಿ ಅದರಿಂದ ಆಗುವ ತೊಂದರೆಗಳಿಗೆ ಸಂಬಂಧಪಟ್ಟ ಮಹಾವಿದ್ಯಾಲಯದ ಪ್ರಾಂಶುಪಾಲರೇ ನೇರವಾಗಿ ಹೊಣೆಗಾರರಾಗುತ್ತಾರೆ.

g) ಪ್ರಾಂಶುಪಾಲರು, ತಮ್ಮ ಕಛೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರದಾಗಿರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡುವಂತೆ ಕೋರಲಾಗಿದೆ.

h) ಪರೀಕ್ಷಾ ಶುಲ್ಕಕ್ಕೆ ಸಂಬಂಧಪಟ್ಟ ಯಾವುದೇ ಹಣವನ್ನು **THE FINANCE OFFICER, AKKAMHADEVI WOMEN'S UNIVERSITY,VIJAYAPURA.** ಈ ಹೆಸರಿನಲ್ಲಿ ಹುಂಡಿ, ಅಥವಾ **Syndicate Bank,jnanaShakti Campus, Torvi. Vijayapura**. **ಈ ಶಾಖೆಯಲ್ಲಿ ಬ್ಯಾಂಕ ಚಲನ್ ಮೂಲಕ A/C No: 944 ಗೆ ಸಂದಾಯ ಮಾಡಬಹುದು.**

i) 2015–16 ನೇ ಸಾಲಿಗೆ ಪ್ರವೇಶ ಪಡೆದು ಪ್ರಥಮ ಹಾಗೂ ದ್ವಿತಿಯ ಸೆಮಿಸ್ಟರ್ ಎರಡೂ ಪರೀಕ್ಷೆಗೆ ಗೈರುಹಾಜರಾದವರು ತೃತೀಯ ಸೆಮಿಸ್ಟರ್ ಪರೀಕ್ಷಾ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

**V.ಪರೀಕ್ಷೆಗೆ ಹಾಜರಾಗಬಯಸುವ ವಿದ್ಯಾರ್ಥಿನಿಯರಿಗೆ ಸೂಚನೆಗಳು:**

1. ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶವಿರುವದಿಲ್ಲ
2. ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸಲಾಗುವದಿಲ್ಲ.
3. ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಪ್ರಾಂಶುಪಾಲರ ಮುಖಾಂತರವೇ ಸಲ್ಲಿಸತಕ್ಕದ್ದು.
4. ವಿದ್ಯಾರ್ಥಿನಿಯರು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ ಇಲ್ಲವೇ ಕನ್ನಡ ಮಾಧ್ಯಮದಲ್ಲಿ ಬರೆಯಬೇಕು. ಇದು ಭಾಷಾ ವಿಷಯಗಳಿಗೆ ಅನ್ವಯವಾಗುವದಿಲ್ಲ.ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿನಿಯರ ಉತ್ತರ ಪತ್ರಿಕೆಯ ಮೌಲ್ಯಮಾಪನವನ್ನು ತಡೆಹಿಡಿಯಲಾಗುವದು.

(P.T.O)

5. ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಲ್ಪಟ್ಟಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆ ಯಾಗುವದಿಲ್ಲ.
6. ಪರೀಕ್ಷಾ ಶುಲ್ಕವನ್ನು ಒಮ್ಮೆ ಪಾವತಿ ಮಾಡಿದ ನಂತರ ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಮರು ಪಾವತಿ ಮಾಡಲಾಗುವದಿಲ್ಲ.
7. ಪರೀಕ್ಷಾ ಅರ್ಜಿಯಲ್ಲಿ ಎಲ್ಲ ವಿಷಯಗಳ ತಪ್ಪಾಗದಂತೆ ಹೆಸರು ಹಾಗೂ ಕೊಡ ಸಂಖ್ಯೆಯನ್ನು ಬರೆಯಬೇಕು.
8. **ಪ್ರಾಂಶುಪಾಲರು ಅರ್ಜಿಗಳನ್ನು ಸಲ್ಲಿಸುವಾಗ ಕ್ರಮವಾಗಿ ಎಲ್ಲ ವಿದ್ಯಾರ್ಥಿನಿಯರ ಯಾದಿ ಲೆಡ್ಜರ್/ಅಂಕಪಟ್ಟಿ. ಜಾತಿ ಹಾಗೂ ಆದಾಯ ಪ್ರಮಾಣಪತ್ರ (ಅನ್ವಯಿಸುವ ವಿದ್ಯಾರ್ಥಿನಿರಿಗೆ ಮಾತ್ರ) ಭರ್ತಿ ಮಾಡಿದ ಅರ್ಜಿ ಶುಲ್ಕ ಭರಿಸಿದ ಚಲನ ಅಥವಾ ಹುಂಡಿ, ನಂತರ ಪ್ರವೇಶಪತ್ರ ಲಗತ್ತಿಸಬೇಕು.**
9. **ನಾನ ಸೆಮಿಸ್ಟರ್ ಪ್ರಥಮ ಮತ್ತು ತೃತಿಯ ಸೆಮಿಸಟರ್ ವಿದ್ಯಾರ್ಥಿನಿಯರ ಯಾದಿಯನ್ನು ಪ್ರತ್ಯೇಕವಾಗಿ ತಯಾರಿಸಿ ದಾಖಲೆಯೊಂದಿಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು.**

**VI-ವಿಶೇಷ ಮಾಹಿತಿ**

1. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ- I ಗುಂಪಿಗೆ ಸೇರಿದ ವಿದ್ಯಾರ್ಥಿನಿಯರ ಪರೀಕ್ಷಾ ಶುಲ್ಕ ಪಾವತಿ ಮಾಡಲು ವಿನಾಯಿತಿ ಇರುತ್ತದೆ. ಆದರೆ, ಪರೀಕ್ಷಾ ಅರ್ಜಿ ಅಂಕಪಟ್ಟಿ ಶುಲ್ಕ ಪಾಸಿಂಗ್ ಸರ್ಟಿಫಿಕೇಟ್ ಮತ್ತು ಅರ್ಜಿ ಪರಿಶೀಲನಾ ಶುಲ್ಕ ಪಾವತಿ ಮಾಡಬೇಕಾಗುತ್ತದೆ. ಸದರಿ ವಿದ್ಯಾರ್ಥಿನಿಯರ ಪರೀಕ್ಷಾ ಶುಲ್ಕವನ್ನು ಆಯಾ ಸರಕಾರಿ ಇಲಾಖೆಯಿಂದ ಪಡೆದು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡುವ ಜವಾಬ್ದಾರಿ ಸಂಬಂಧಪಟ್ಟ ಪ್ರಾಂಶುಪಾಲರ ಹೊಣೆಯಾಗಿರುತ್ತದೆ. ಒಂದು ವೇಳೆ ಸಂದಾಯ ಮಾಡದಿದ್ದಲ್ಲಿ ಆ ಹಣವನ್ನು ಆಯಾ ಮಹಾವಿದ್ಯಾಲಯದಿಂದ ಭರಿಸಿಕೊಳ್ಳಲಾಗುವದು. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿನಿಯರ ವಿವರಗಳನ್ನೊಳಗೊಂಡ ಪಟ್ಟಿಯ ಒಂದು ಪ್ರತಿಯನ್ನು ಈ ವಿಭಾಗಕ್ಕೂ ಸಲ್ಲಿಸಬೇಕು.**(ಸದರಿ ಕೋರ್ಸಿಗೆ ಅನ್ವಯಿಸಿದಲ್ಲಿ ಮಾತ್ರ)**
2. ಪ್ರವರ್ಗ-3 (ಬಿ) ಹಾಗೂ ಸಾಮಾನ್ಯ ಗುಂಪಿಗೆ ಸೇರಿದ ವಿದ್ಯಾರ್ಥಿನಿಯರ ಪ್ರತ್ಯೇಕ ಪಟ್ಟಿಯನ್ನು (ದ್ವಿಪ್ರತಿಗಳಲ್ಲಿ) ಶುಲ್ಕದ ವಿವರಗಳನ್ನೊಳಗೊಂಡಂತೆ ಒಂದು ಪ್ರತಿಯನ್ನು ಕುಲಸಚಿವರು ( ಮೌಲ್ಯಮಾಪನ), ಹಾಗೂ ಇನ್ನೊಂದು ಪ್ರತಿಯನ್ನು ವಿತ್ತಾಧಿಕಾರಿಗಳು,ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇವರಿಗೆ ಕಳುಹಿಸಿಕೊಡತಕ್ಕದ್ದು.

6/7/18

**ಕುಲಸಚಿವರು (ಮೌಲ್ಯಮಾಪನ)**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ.

**ಪ್ರತಿ:**

1. ಪ್ರಾಂಶುಪಾಲರು ಎಲ್ಲ ಸಂಲಗ್ನತೆ ಹೊಂದಿದ ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳು.
2. ವಿತ್ತಾಧಿಕಾರಿಗಳು, ಅಕ್ಕಮಹಾದೇವಿ ಮಹಿಳಾ ವಿಶ್ವವಿದಾನ್ಯಿಲಯ, ವಿಜಯಪುರ.
3. ವಿಶ್ವವಿದ್ಯಾಲಯದ ಎಲ್ಲ ಉಪಕುಲಸಚಿವರುಗಳು: ಸಹಾಯಕ ಕುಲಸಚಿವರುಗಳು ಮತ್ತು ಪರೀಕ್ಷಾ ವಿಭಾಗದ ಎಲ್ಲ ಸಿಬ್ಬಂದಿಗಳಿಗೆ.
4. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು/ ಕುಲಸಚಿವರು (ಮೌಲ್ಯಮಾಪನ) ಅವರ ಆಪ್ತ ಸಹಾಯಕರು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
5. ಕಛೇರಿ ಕಡತಕ್ಕೆ .